[redacted]

AS – 009

# Second Semester B.Com. Examination, April/May 2012
## (Repeaters (2010-11) Scheme)
### ಕನ್ನಡ ಭಾಷೆ - II
### ಸಾಹಿತ್ಯ ಸಮನ್ವಯ - 2 ಮತ್ತು ನಿಗೂಢ ಮನುಷ್ಯರು

Time : 3 Hours                                                                 Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : **(1×10=10)**

1) ನಮಗೆ 'ಶ್ರೀ ಧರ್ಮಸೂತ್ರ' ಯಾವುದಾಗಬೇಕು ?
2) ಜಗತ್ತಿನಲ್ಲಿ ಕೆಲವರು ಗಡಿಯಾರವಾದರೆ ಇನ್ನು ಕೆಲವರು ಏನಾಗುತ್ತಾರೆ ?
3) 'ಜೀವದ ಲಜ್ಜೆ'ಗೆ ಯಾವುದು ಕಾರಣವಾಗುತ್ತದೆ ?
4) ಚಂದ್ರ ದ್ರೋಣ ಪರ್ವತದ ಮತ್ತೊಂದು ಹೆಸರೇನು ?
5) ರಂಗಪ್ಪ ಎಲ್ಲಿ ಕೆಲಸ ಮಾಡುತ್ತಿದ್ದ ?
6) ತೀ.ನಂ.ಶ್ರೀ. ಯವರು ಉನ್ನತ ವ್ಯಾಸಂಗಕ್ಕೆ ಎಲ್ಲಿಗೆ ಹೋದರು ?
7) ಸಂಶಯದ ಪಂಜವತ್ತಿ ಬೆಕ್ಕು ಏನನ್ನು ಪರಚುತ್ತದೆ ?
8) ಗಂಡನ ಮನೆಗೆ ಬಂದ ಹೆಣ್ಣಿನ ಮೊದಲ ದಿನದ ಮೌನ ಹೇಗಿತ್ತು ?
9) ಕಾಂಪ್ರನ ಸಮಸ್ಯೆಗೆ ಕಾರಣರಾದವರು ಯಾರು ?
10) ವರದಕ್ಷಿಣೆ ತರದ ಹೆಣ್ಣನ್ನು ಕೇರಳದ ಮುಸ್ಲಿಮರು ಹೇಗೆ ನಡೆಸಿಕೊಳ್ಳುತ್ತಾರೆ ?

II. ಯಾವುದಾದರೂ ಐದನ್ನು ಕುರಿತು ಉತ್ತರಿಸಿ : **(5×2=10)**

1) 'ನ ಪ್ರಮದಿತವ್ಯ'
2) ''ಪಾದರಕ್ಷೆಗಳ ಪರಿಷತ್ತು''
3) ಚೆನ್ನವೀರ ಕಣವಿ
4) ಪಿನೋಕಿಯೋ
5) ಲಿಂಗಸಂಗಿ
6) ಮರಸರ ಮತ್ತು ಕುಳುಪ
7) ಉಗ್ರಗಿರಿ
8) 'ಜಿಹಾದ್'

P.T.O.

www.onlinebu.com

III. ಯಾವುದಾದರೂ ಒಂದು ಪದ್ಯವನ್ನು ವಿಶ್ಲೇಷಿಸಿ : **(1×6=6)**

................ ಮುತ್ತಜ್ಜ ಕಟ್ಟಿದ್ದ ಮನೆ
ದೀಪ ಹಚ್ಚುವರಿಲ್ಲ; ಶ್ರದ್ಧೆ ಕೊಡುವನ್ನ ನೀರಿಲ್ಲದೆಯೆ
ಉರುಳುವರು ಪಿತೃಪಿತಾಮಹರು. ಹೊಕ್ಕುಳಿನ ಬಳ್ಳಿ
ಕತ್ತರಿಸಬಾರದೋ – ಏನೊ. ಬಿತ್ತಕ್ಕೆ ಬೇರಿನ ಚಿಂತೆ
ಇಲ್ಲ; ಆದಷ್ಟು ದೂರ ಟಣ್ಣೆಂದೆಗರಿ
ಬಿಚ್ಚುವುದು ಮಾಯಾಪಟವ. ಪ್ರಾಯದ ಲಹರಿ
ಗೆಲ್ಲಿ ಯಾವುದು ತೀರ, ಯಾವ ನೆಲೆ, ಯಾವ ಗುರಿ ?

ಅಥವಾ

ಮೂರನೆಯ ಸಂಜೆ ಹೆರಳಿನ ತುಂಬ ದಂಡೆ ಹೂ
ಹೂವಿಗೂ ಜೀವ ಬಂದಂತೆ;
ಸಂಜೆಯಲಿ ರಾತ್ರಿ ಇಳಿದಂತೆ, ಬಿರುಬಾನಿಗೂ
ಹುಣ್ಣಿಮೆಯ ಹಾಲು ಹರಿದಂತೆ !

IV. ಯಾವುದಾದರೂ ಆರು ಪ್ರಶ್ನೆಗಳಿಗೆ ಉತ್ತರಿಸಿ : **(6×4=24)**

1) 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವನದಲ್ಲಿ ಅಲ್ಪಸಂಖ್ಯಾತರ ಕಷ್ಟಗಳನ್ನು ಹೇಗೆ ವಿವರಿಸಿದ್ದಾರೆ ?

2) ಅಮೂರ್ತವಾದ ಕಾಲವನ್ನು ಮನುಷ್ಯರ ಬದುಕು ಹಿಡಿದಿಟ್ಟು, ಗಡಿಯಾರವಾಗುವ ಬಗೆ ಹೇಗೆ ?

3) ಕಾಲೇಜಿನ ಕರ್ಣಾಟಕ ಸಂಘದಲ್ಲಿ ಬಿ.ಎಂ.ಶ್ರೀ. ಯವರು ಇಂಗ್ಲೀಷಿನಲ್ಲಿ ಮಾತಾಡಿದ ಪ್ರಸಂಗ ಮತ್ತು ಪರಿಣಾಮವೇನು ?

www.onlinebu.com
http://www.onlinebu.com

4) ವಿದ್ಯಾರ್ಥಿಗಳು ಅಡಿಗೆ ತಯಾರಿಸುವ ಸಂದರ್ಭದಲ್ಲಿ ಅನುಭವಿಸಿದ ತೊಂದರೆಗಳನ್ನು ವಿವರಿಸಿ.

5) ವರದಕ್ಷಿಣೆ ಪದ್ಧತಿಯ ನಿರ್ಮೂಲನೆಗೆ ಲೇಖಕಿ ನೀಡುವ ಸಲಹೆಯೇನು ?

6) ಕಾಂಪ್ರ ಮತ್ತು ಮರಸರನ ನಡುವೆ ಜಗಳವಾಗಲು ಕಾರಣವೇನು ?

7) ಶಾರಿ ಗಂಡನಿಂದ ದೂರವಾಗಲು ಕಾರಣವೇನು ? ಅದರ ಪರಿಣಾಮವೇನಾಯ್ತು ?

8) ಅಕ್ಕನನ್ನು ಸಮಕಾಲೀನ ವಚನಕಾರ್ತಿಯರು ಸ್ಮರಿಸದಿರಲು ಕಾರಣವೇನು ?

V. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : (4×10=40)

1) "ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು ?" – ಎಂದು ಕುವೆಂಪುರವರು ಕೇಳಲು ಕಾರಣವೇನು ? ಸ್ಪಷ್ಟಪಡಿಸಿ.

ಅಥವಾ

'ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ' ಎಂಬ ಕವಿಯ ಮಾತಿನ ಹಿನ್ನೆಲೆಯಲ್ಲಿ ವರ್ಧಮಾನ ಕವಿತೆಯ ಸ್ವಾರಸ್ಯವನ್ನು ವಿವರಿಸಿ.

2) ಗುರುಗಳಾದ ಪ್ರೊ. ಹಿರಿಯಣ್ಣ ಮತ್ತು ಪ್ರೊ. ಬಿ.ಎಂ. ಶ್ರೀಯವರ ವ್ಯಕ್ತಿತ್ವವನ್ನು ತೀ.ನಂ. ಶ್ರೀಯವರು ಹೇಗೆ ಚಿತ್ರಿಸಿದ್ದಾರೆ ?

ಅಥವಾ

'ಮಸಾಲೆ ದೋಸೆ' ಪ್ರಬಂಧದ ಸ್ವಾರಸ್ಯವನ್ನು ಬರೆಯಿರಿ.

www.onlinebu.com

3) ಬಸವಣ್ಣನವರು ಅಕ್ಕನನ್ನು ಯಾವ ಕಾರಣಗಳಿಗಾಗಿ ಮೆಚ್ಚುತ್ತಾರೆ ? ವಿವರಿಸಿ.

**ಅಥವಾ**

ಭಯೋತ್ಪಾದನೆಗೂ – ಇಸ್ಲಾಂ ಧರ್ಮಕ್ಕೂ ತಳಕು ಹಾಕಿಕೊಳ್ಳಲು ಪೂರಕವಾದ ಕಾರಣಗಳು ಮತ್ತು ಪರಿಣಾಮಗಳನ್ನು ತಿಳಿಸಿ.

4) 'ನಿಗೂಢ ಮನುಷ್ಯರು' ಎಂಬ ಶೀರ್ಷಿಕೆ ಕಾದಂಬರಿಗೆ ಅನ್ವಯವಾಗುವುದೇ ? ಚರ್ಚಿಸಿ.

**ಅಥವಾ**

'ವೇಷ ಬದಲಾವಣೆ' ಯ ಹಂಬಲದಿಂದಾಗಿ ಗೋಪಾಲಯ್ಯ ಅನುಭವಿಸಬೇಕಾಗಿ ಬಂದ ಕಷ್ಟಗಳನ್ನು ವಿವರಿಸಿ.

---

www.onlinebu.com
http://www.onlinebu.com

**AS – 009**

**II Semester B.Com. Examination, April/May 2012**
**(Prior to 2010-11) (Repeaters Only)**
**ಕನ್ನಡ ಭಾಷಾ ಪತ್ರಿಕೆ - II**
**ಸಾಹಿತ್ಯ ಸಂವಾದ - ೧**

Time : 3 Hours Max. Marks : 90

I. ೧) ಅರ್ಥ ಬರೆಯಿರಿ : **(1×4=4)**

ಕೃತಘ್ನ, ಕುನ್ನಿ, ದಾಡೆ, ತಮ.

೨) ನಾನಾರ್ಥಗಳನ್ನು ಬರೆಯಿರಿ : **(1×4=4)**

ಶಿವ, ಅರಸು, ಅಂಬರ, ಉತ್ತರ.

೩) ಮೂಲ ರೂಪವನ್ನು ಬರೆಯಿರಿ : **(1×4=4)**

ದ್ಯಾವರು, ಇಸ, ಮಾಲ್, ಗ್ರಾಚಾರ.

೪) ಸಮಾನಾರ್ಥಕ ಪದಗಳನ್ನು ಬರೆಯಿರಿ : **(1×4=4)**

ಕಾಡು, ಸೂರ್ಯ, ಧರಣಿ, ಸಾರು.

೫) ನಾಲ್ಕು ಜೋಡಿ ಪದಗಳನ್ನು ಬರೆಯಿರಿ : **(1×4=4)**

೬) ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ : **(1×4=4)**

ಬಾಯಿ ಬಿಡು, ಕಾಲಿಗೆ ಬುದ್ಧಿಹೇಳು, ಗಂಟಲು ಕಟ್ಟು, ಕೈಕೊಡು.

೭) ಈ ಗಾದೆ ಮಾತುಗಳನ್ನು ವಿವರಿಸಿ : **(2×3=6)**

೧) ಶಂಖದಿಂದ ಬಂದದ್ದೇ ತೀರ್ಥ

೨) ಅಲ್ಪವಿದ್ಯೆ ಮಹಾಗರ್ವಿ

www.onlinebu.com

II. ತಾರ್ಕಿಕ ಆಲೋಚನೆಯನ್ನು ಆಧರಿಸಿ ನಾಲ್ಕು ಪ್ರಶ್ನೆಗಳನ್ನು ಉತ್ತರಿಸಿ : (4×5=20)

೧) "ಒಳ್ಳೆಯದದರಿಂದ ಕಡೆಗಾದುದೇನಜ್ಜ" ಎಂದು ಮೊಮ್ಮಗನು ಕೇಳುವ ಮಾತಿನ ಹಿಂದಿರುವ ಆಶಯವೇನು ?

೨) 'ರಾಮನ ಸವಾರಿ ಸಂತೆಗೆ ಹೋದದ್ದು' ಕಥೆಯಲ್ಲಿ ಸದಾನಂದ ಭಟ್ಟರ ಪಾತ್ರ ಚಿತ್ರಿಸಿ.

೩) ಅಕ್ಕನ ವಚನದಲ್ಲಿ ವಾಸ್ತವಕ್ಕಿಂತ ಕನಸೇ ಹೆಚ್ಚು ಹೇಗೆ ? ವಿಚಾರ ಮಾಡಿ.

೪) ಸತ್ಯ ನಾರಾಯಣ 'ಸತ್ ನಾರ್ಣಾ' ಆದುದು, ಈ ವ್ಯಂಗ್ಯವನ್ನು ಚರ್ಚಿಸಿ.

೫) ಮನುಷ್ಯನ ಕ್ರೌರ್ಯ–ವಿ.ಜಿ. ಭಟ್ಟರ 'ಕನಸಿನಲ್ಲಿ' ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ ?

೬) ಗೋವಳಿಗನು ಉತ್ತರನನ್ನು ಹುರಿದುಂಬಿಸಿದ ಪ್ರಸಂಗ – ವಿವರಿಸಿ.

III. ನಾಲ್ಕು ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿ : (4×5=20)

೧) ಗಾಂಧೀಜಿಯ ರಾಜಕೀಯ ಚಿಂತನೆಯ ವೈಶಿಷ್ಟ್ಯಗಳನ್ನು ಗುರುತಿಸಿ.

೨) 'ನೀಗ್ರೋ ತನ್ನ ನಾಡಿನಲ್ಲಿಯೇ ಪರಕೀಯನಾಗಿದ್ದಾನೆ' – ಈ ಮಾತನ್ನು ವಿವರಿಸಿ.

೩) 'ಸಂಜೆದಾರಿ' ಕವಿತೆಯಲ್ಲಿ ನಿರ್ದಿಷ್ಟ ಜೀವನ ವಿಧಾನವೊಂದರ ಚಿತ್ರಣ ಹೇಗೆ ಮೂಡಿಬಂದಿದೆ ?

೪) ಕೃಷ್ಣನ 'ಕಲಿಯುಗ ಮಹಾಲಲಿತ ಕಾವ್ಯದ' ಮುಖ್ಯಾಂಶಗಳನ್ನು ವಿವರಿಸಿ.

೫) ಅಮಾಸ ಮತ್ತು ಕುರಿಯಯ್ಯರ ಬದುಕಿನ ಸಮಾನ ಮತ್ತು ಭಿನ್ನ ಅಂಶಗಳನ್ನು ಗುರುತಿಸಿ.

೬) ಮಂದಣ್ಣನ ಮೇರೆಜಿನ ವಿಡಂಬನಾತ್ಮಕ ಅಂಶಗಳಾವುವು ಪರಿಶೀಲಿಸಿ.

www.onlinebu.com
http://www.onlinebu.com

IV. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20)

೧) ಯುದ್ಧದ ಸ್ವರೂಪ ಹಾಗೂ ಪರಿಣಾಮಗಳ ಬಗ್ಗೆ ನಾವು ತಾಳಬೇಕಾದ ನಿಲುವು ಯಾವುದು ?

೨) ದುರ್ಬಲರ ಕನಸುಗಳು ಸಬಲರಿಂದ ಹೇಗೆ ಭಿನ್ನವಾಗುತ್ತವೆ? ಒಂದೆರಡು ನಿದರ್ಶನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

೩) ಮಾರ್ಟಿನ್ ಲೂಥರ್ ಕಿಂಗ್ ಅವರ ಭಾಷಣದ ಬಗ್ಗೆ ನಿಮ್ಮ ಪ್ರತಿಕ್ರಿಯೆ ಬರೆಯಿರಿ.

೪) ''ವಾನರಾಯಣ ಕಥೆ ಸಮಕಾಲೀನ ರಾಜಕೀಯ ವಿದ್ಯಮಾನಗಳಿಗೆ ಹಿಡಿದ ಕನ್ನಡಿ'' ಈ ಹೇಳಿಕೆಯನ್ನು ಪರಿಶೀಲಿಸಿ.

www.onlinebu.com